ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ, ದಿನಾಂಕ ೨೪ನೇ ಫೆಬ್ರುವರಿ ೧೯೮೬ ಫಾಲ್ಗುಣ ಶು ೧೯೦೭ ಶಕ

ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ, ಸದನವು ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್ ರವರು) ಪೀಠವನ್ನು ಅಲಂಕರಿಸಿದರು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಕೊಡಲಾದ ಬಾಯಿ ಮಾತಿನ ಉತ್ತರಗಳು

ಚುಕ್ಕೆ ಪ್ರಶ್ನೆ ಸಂಖ್ಯೆ(೧೬೨೯)

ಶ್ರೀ ಬಿ. ಎನ್. ಬಚ್ಚೇಗೌಡ.— ಮಾನ್ಯ ಅಧ್ಯಕ್ಷರೇ ವ್ಯಾಪಾರಸ್ಥರಿಂದ, ಅಕ್ರಮ ದಾಸ್ತಾನು ಗಾರರಿಂದ ವಶಪಡಿಸಿಕೊಂಡ ಆಹಾರ ಧಾನ್ಯಗಳನ್ನು ತಾವು ಎಲ್ಲಿ ಇಡುತ್ತೀರಿ ? ಈ ರೀತಿಯಾಗಿ ವಶಪಡಿಸಿಕೊಂಡಂಥ ಆಹಾರಧಾನ್ಯಗಳು ಒಟ್ಟು ಎಷ್ಟು ಕ್ವಿಂಟಾಲ್ ? ಮತ್ತು ಅನೇಕ ವರ್ಷಗಳಿಂದ ಅಗತ್ಯ ವಸ್ತುಗಳನ್ನು ವಿತರಣೆ ಮಾಡದೆ ಹಾಗೆಯೇ ಉಳಿದುಕೊಂಡಿರತಕ್ಕಂಥ ಆಹಾರಧಾನ್ಯಗಳು ಎಷ್ಟು ಕ್ವಿಂಟಾಲ್ ಇದೆ ? ರಾಜ್ಯದಲ್ಲಿ ಇಲ್ಲಿಯವರೆಗೆ ಎಷ್ಟು ಅಗತ್ಯವಸ್ತುಗಳನ್ನು ವಶಪಡಿಸಿಕೊಂಡಿದ್ದೀರಿ ? ಮಂತ್ರಿ ವಿತರಣೆ ಮಾಡದೆ ಬೇರೆ ಬೇರೆ ಕಡೆಯಿಂದ ಬಂದಿರತಕ್ಕಂಥ ಕಾನ್‌ಫಿಸ್ಕೇಷನ್ ಗೂಡ್ಸ್ ಮಂತ್ತು ಚೀಟ್ ಮಾಡಿರತಕ್ಕಂಥ ಅಗತ್ಯ ವಸ್ತುಗಳನ್ನು ವಿತರಣೆ ಮಾಡುವುದಕ್ಕೆ ಏನು ವ್ಯವಸ್ಥೆಯನ್ನು ಮಾಡಿದ್ದೀರಿ ಎನ್ನುವ ಬಗ್ಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.— ಅಗತ್ಯ ವಸ್ತುಗಳೆಂದು ಏನು ಕರೆದಿರುತ್ತೀವೆ ಅವುಗಳನ್ನು ೧೯೫೫ರ ಕಾನೂನು ಪ್ರಕಾರ ಯಾರು ಉಲ್ಲಂಘನೆ ಮಾಡಿ ಶೇಕರಣೆ ಮಾಡಂವುದಾಗಲಿ, ಅಥವಾ ವ್ಯಾಪಾರ ಮಾಡತಕ್ಕಂಥ ವ್ಯಾಪಾರಸ್ಥರಾಗಿರಲಿ ಅಥವಾ ಮಿಲ್ ಮಾಲೀಕರೆ ಆಗಿರಲಿ ಅವರಮೇಲೆ ಧಾಳಿಮಾಡಿ ಆಹಾರ ಪದಾರ್ಥಗಳನ್ನು ವಶಪಡಿಸಿಕೊಳ್ಳತಕ್ಕಂಥದ್ದು ಸರ್ಕಾರದ ಕರ್ತವ್ಯವಾಗಿರುತ್ತದೆ. ಮಾನ್ಯ ಸದಸ್ಯರು ಹೇಳಿದಹಾಗೆ ವಶಪಡಿಸಿಕೊಂಡ ಇಂಥ ವಸ್ತುಗಳನ್ನು, ಮತ್ತು ಆಹಾರ ಧಾನ್ಯಗಳನ್ನು ನಮ್ಮದೇ ಆದಂಥ ಟಿ. ಎ. ಪಿ. ಎಂ. ಸಿ. ಎಸ್. ಗೋಡೌನ್‌ಗಳಲ್ಲಿ ಇಡುತ್ತೇವೆ. ತಮ್ಮ ಗಮನಕ್ಕೆ ತರುವುದಾದರೆ ಹೊಸಕೋಟೆ ತಾಲ್ಲೂಕಿನಲ್ಲಿ ಈ ಬಗ್ಗೆ ನಾಲ್ಕು ಪ್ರಕರಣಗಳು ಬೆಳಕಿಗೆ ಬಂದಿವೆ. ಒಂದು ಪ್ರಕರಣದಲ್ಲಿ ಸಿ. ಮುನಿಯಪ್ಪ ಮತ್ತು ಗಂಗಾಧರಪ್ಪ ಅವರಿಂದ ೨೮ ಸಾವಿರದ ಏಳುನೂರು ರೂಪಾಯಿ ಬೆಲೆಬಾಳತಕ್ಕಂಥ ಆಹಾರ ಧಾನ್ಯಗಳನ್ನು ವಶಪಡಿಸಿಕೊಂಡಿರುವುದು. ನಿಜ. ಅಲ್ಲಿ ನಂತರ ಹರಾಜು ಮಾಡಿದಾಗ ಯಾರೂ ಬಿಡ್ಡನವರು ಬರಲಿಲ್ಲ. ಹೀಗಾಗಿ ವಿತರಣೆಯಾಗದಂಥ ಪರಿಸ್ಥಿತಿ ಬಂತು. ಈಗ ಅವುಗಳನ್ನು ವಿತರಣೆ ಮಾಡಲಾಗಿದೆ ಎಂದು ನನ್ನ ಗಮನಕ್ಕೆ ಬಂದಿದೆ. ಅಗತ್ಯ ವಸ್ತುಗಳು ಹಾಳಾಗದಂತೆ ನೋಡಿಕೊಳ್ಳಬೇಕೆಂದು ಮಾನ್ಯ ಸದಸ್ಯರಿಗೆ ಎಷ್ಟು ಕಳಕಳಿಯಿದೆಯೋ, ಅಷ್ಟೇ ಕಳಕಳಿ ನಮ್ಮ ಇಲಾಖೆಗೂ ಇದೆ. ಆದ್ದರಿಂದ ಇದರ ಬಗ್ಗೆ ನಾವು ಜವಾಬ್ದಾರಿಯನ್ನು ತೆಗೆದುಕೊಂಡಿದ್ದೇವೆ. ಮಾನ್ಯ ಸದಸ್ಯರು ಇನ್ನೊಂದು ಪ್ರಶ್ನೆಯನ್ನು ಕೇಳಿದರು. ರಾಜ್ಯದಲ್ಲಿ ಎಷ್ಟು ಆಹಾರಧಾನ್ಯಗಳನ್ನು ವಶಪಡಿಸಿಕೊಂಡಿದ್ದೀರಿ ಎಂದು. ಮತ್ತು ಎಷ್ಟು ಮುಟ್ಟುಗೋಲು ಹಾಕಿಕೊಂಡಿದ್ದೀರಿ ಎಂದು ಕೇಳಿದ್ದಾರೆ. ಜನವರಿ ೮೫ರಿಂದ ಡಿಸೆಂಬರ್ ೮೫ರವರೆಗೆ ಮೂರು ಕೋಟಿ ಮೂವತ್ತೆರಡೂ ಲಕ್ಷ ಬೆಲೆಬಾಳುವ ಆಹಾರ ಧಾನ್ಯಗಳನ್ನು ವಶಪಡಿಸಿಕೊಂಡಿದ್ದೇವೆ. ಮತ್ತು ೨೧ ಲಕ್ಷ ೯೪ ಸಾವಿರ ಬೆಲೆಬಾಳತಕ್ಕಂಥ ಆಹಾರ ಧಾನ್ಯಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದೇವೆ.

ಶ್ರೀ ಬಿ. ಎನ್. ಬಚ್ಚೇಗೌಡ.— ಆದಷ್ಟು ಬೇಗ ವಶಪಡಿಸಿಕೊಂಡಿರತಕ್ಕಂಥ ಆಗತ್ಯ ವಸ್ತುಗಳನ್ನು ವಿತರಣೆ ಮಾಡುವುದಕ್ಕೋಸ್ಕರ ಜಿಲ್ಲಾಧಿಕಾರಿಗಳಿಗೆ ಆಗಲಿ ಅಥವಾ ಅಸಿಸ್ಟೆಂಟ್ ಕಮೀಶನರ್‌ಗೆ ಆಗಲಿ, ಆದೇಶವನ್ನು ಕೊಡಬೇಕು ವಿತಕ್ಕೆಂದರೆ ಸುಮಾರು ಎರಡು-ಮೂರು ವರ್ಷಗಳ ಕಾಲ ಆಹಾರಧಾನ್ಯಗಳು ಹಾಗೆಯೇ ಇರುವಂತಹ ಪರಿಸ್ಥಿತಿಯನ್ನು ಕಂಡಿದ್ದೇವೆ. ಇದರ ಬಗ್ಗೆ ವ್ಯವಸ್ಥೆ ಯನ್ನು ತಾವು ಮಾಡುತ್ತೀರಾ ?

ಶ್ರೀ ಜೆ. ಬಸವಣ್ಣಪ್ಪ.— ಎರಡು-ಮೂರು ವರ್ಷಗಳ ಕಾಲ ಆಹಾರಧಾನ್ಯಗಳನ್ನು ಗೋಡೌನ್ ಗಳಲ್ಲಿ ಇಡುವುದಕ್ಕೆ ಬಿಡುವುದಿಲ್ಲ. ಪ್ರತಿಯೊಂದು ಆಹಾರಧಾನ್ಯಕ್ಕೂ ಇಟ್ಟುಕೊಳ್ಳುವುದಕ್ಕೆ ಲಿಮಿಟ್ ಇದೆ. ಭತ್ತ, ರಾಗಿ, ಜೋಳ ಯಾವುದೇ ಆಗಬಹುದು. ಎಷ್ಟು ಕಾಲ ಇಟ್ಟುಕೊಳ್ಳಬಹುದು ಎಂದಿದೆ. ಇದಕ್ಕೆ ಅನುಗುಣವಾಗಿ ವಿತರಣೆ ಮಾಡಂತ್ತೇವೆ. ಮಾನ್ಯ ಸದಸ್ಯರು ಒಂದು ಕೇಸ್‌ನಲ್ಲಿ ಪ್ರತ್ಯಕ್ಷವಾಗಿ ನೋಡಿ ಹೇಳಿದ್ದಾರೆ. ಆದರೆ ಈಗಾಗಲೇ ಇದನ್ನು ನಾವು ಡಿಸ್‌ಫೋಸ್ ಮಾಡಿದ್ದೇವೆ.

ಔರಾದ್ ತಾಲ್ಲೂಕಿನಲ್ಲಿರುವ ಸರಕಾರಿ ಆಸ್ಪತ್ರೆಗಳು.

೧೫೫೯. ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್).— ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಔರಾದ್ ತಾಲ್ಲೂಕಿನಲ್ಲಿ ಸರ್ಕಾರಿ ಆಸ್ಪತ್ರೆಗಳ ಸಂಖ್ಯೆ ಎಷ್ಟು ಹಾಗೂ ಅವುಗಳಲ್ಲಿ ಸರ್ಕಾರಿ ಕಟ್ಟಡಗಳಲ್ಲಿರುವ ಆಸ್ಪತ್ರೆಗಳ ಸಂಖ್ಯೆ ಎಷ್ಟು ?

ಆ) ಅವುಗಳ ಪೈಕಿ ವೈದ್ಯರು ಹಾಗೂ ಮಹಿಳಾ ವೈದ್ಯರಿಲ್ಲದ ಆಸ್ಪತ್ರೆಗಳ ಸಂಖ್ಯೆ ಎಷ್ಟು ?

ಇ) ಈ ಆಸ್ಪತ್ರೆಗಳಿಗೆ ಔಷಧಿಗಳು ಸರಿಯಾಗಿ ವಿತರಣೆಯಾಗುತ್ತಿದೆಯೇ ? ಹಾಗಿಲ್ಲದಿದ್ದಲ್ಲಿ ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಡಾ. ಹೆಚ್. ಎಲ್. ತಿಮ್ಮೇಗೌಡ.— (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

೨) ೧೧

೬

ಆ) ವೈದ್ಯರಿಲ್ಲದ್ದು — ೧ ಆರೋಗ್ಯ ಘಟಕ (ಹೋಳ ಸಮುದ್ರ) ಮಹಿಳಾ ವೈದ್ಯರಿಲ್ಲದ್ದು:

೧) ಸಾರ್ವಜನಿಕ ಆಸ್ಪತ್ರೆ — ೧

೨) ಪ್ರಾಥಮಿಕ ಆರೋಗ್ಯ ಕೇಂದ್ರಗಳು ೨

೩) ಹೌದು, ಉದ್ಭವಿಸುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ.—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮಂತ್ರಿಗಳು (ಅ) ಪ್ರಶ್ನೆಗೆ 'ಒಂದು' ಎಂದು ಹೇಳಿದ್ದಾರೆ. ಆದರೆ ಬಡಗಾಂವಿಯಲ್ಲಿ ವೈದ್ಯರೇ ಇಲ್ಲ. ಅಲ್ಲಿ ಮಹಿಳಾ ವೈದ್ಯರು ಎಷ್ಟು ವರ್ಷಗಳಿಂದ ಇದ್ದಾರೆ ಎಂದು ತಿಳಿಸುತ್ತೀರಾ ? ಮತ್ತು ಇದರ ಬಗ್ಗೆ ಯಾವಾಗ ಹುದ್ದೆಗಳನ್ನು ಭರ್ತಿ ಮಾಡುತ್ತೀರೆಂದು ನಾನು ತಮ್ಮ ಮುಂಖಾಂತರ ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಡಿ. ಬಿ. ಇನಾಂದಾರ್(ಆರೋಗ್ಯ ಮತ್ತು ಸಮಾಜ ಕಲ್ಯಾಣ ರಾಜ್ಯ ಸಚಿವರು).—ಅಧ್ಯಕ್ಷರೇ, ಈಗ ಸುಮಾರು ೧೧೦ ಜನ ಮಹಿಳಾ ವೈದ್ಯರನ್ನು ಭರ್ತಿ ಮಾಡಿಕೊಂಡಿದ್ದು, ಇನ್ನೂ ನಾಲ್ಕು ಜನ ವೈದ್ಯರಿಗೆ ನೇಮಕಾತಿ ಆಜ್ಞೆಗಳನ್ನು ಕಳಿಸಿಕೊಡುತ್ತಿದ್ದೇವೆ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ.—ಔಷಧಿಗಳ ಬಗ್ಗೆ ತಾವು 'ಹೌದು' ಎಂದು ಹೇಳಿದ್ದೀರಿ. ಕೆಲವು ಆಸ್ಪತ್ರೆಗಳಲ್ಲಿ ಔಷಧಿಗಳೇ ಇಲ್ಲದಿರುವಂತಹ ಪರಿಸ್ಥಿತಿ ಇದೆ. ಆದ್ದರಿಂದ ಯಾವ್ಯಾವ ಆಸ್ಪತ್ರೆಗಳಲ್ಲಿ ಎಷ್ಟೆಷ್ಟು ಔಷಧಿಗಳನ್ನು ಕೊಡಲು ಕ್ರಮ ತೆಗೆದುಕೊಂಡಿದ್ದೀರಿ, ಎಂದು ದಯವಿಟ್ಟು ತಿಳಿಸುತ್ತೀರಾ ?